ನೀನು ಯಾವತ್ತಾದ್ರು ಅಪ್ಪೇನಾದ, ಅವ್ವೇನಾದ್ಲು. ಅವ್ರ್ ಕಷ್ಟ ಸುಖ ಏನು ಅಂತ ಈ ಕಡೇಗ್ ತಿರ್ಗ್ ನೋಡಿದ್ದಾಯ್ಲಾ? ನೀನಾಯ್ತು ನಿನೆಂಡ್ರಾಯ್ತು ಅಂತ ಪಟ್ಣ ಸೇರ್ಕೊಂಡು ಇವತ್ ನಂಗ್ ಬುದ್ಧಿ ಹೇಳುಕ್ ಬಂದಾಯ?. ನೋಡ್ ಬಾವ ಅಪಾಟ್ ಸಂಪಾದ್ನೆ ಮಾಡ್ತಾವ್ನೆ. ಹಟ್ಟಿಗ್ ಒಂದು ರೂಪಾಯಂತ ಏನಾದ್ರು ಕೊಟ್ಟಾನ? ಹೋಗ್ಲಿ ನಾನ್ ಓದುವಾಗಾದ್ರು ಇಡಿಲಾ ಹತ್ರುಪಾಯಿ ಅಂತೇನಾದ್ರು ಕೊಟ್ಟಿದಾನ? ಅಪ್ಪಯ್ಯ, ಅವ್ವ ಅಂತ ಇವತ್ ಕನಿಕರ ಬಂದ್ಬುಡ್ತು.. ಅಲ್ಲ ಕಣಪ್ಪ ಮನೇಗ್ ಹಿರಿಮಗ ನೀನು. ಅಪ್ಪಯ್ನ್ ಕಷ್ಟನಾ ಮನ್ತನ್ದ್ ಗೌರವನಾ ಯಾವನ್ಲಾ ಉಳಿಸ್ಬೇಕು? ಇವ್‌ನ್ ಓದ್ಬುಟ್ಟಿದ್ದಾನಂತೆ ಪಟ್ಣದಲ್ಲಿದಾನಂತೆ. ಇವ ಸೂಟು ಬೂಟು ಹಾಕೊಂಡ್ ಮಜ ಮಾಡುದು. ನಾನ್ ಗಂಟೆ ಹಿಡ್ಕಂಡು ಮೂರ್ ನಾಮ ಹಾಕಂಡು ಮೂರೊತ್ತು ದ್ಯಾವ್ರು ಗುಡಿ ಅಂತ ತಿರ್ಗುದಂತೆ. ಹೋಗಲೆ ಹೋಗ್ಲಾ ನನ್ನ ಕೈಲಿ ಅದೆಲ್ಲಾ ಆಗುದಿಲ್ಲ.. ಅಪ್ಪಯ್ಯ ನಿನ್ ಕೈಲಿ ಆಗುಗುಂಟ ಮಾಡು. ಆಮ್ಯಾಕೆ ಪಟೇಲ್‌ರಿಗೆ ಯೋಳ್ಬುಟ್ಟು ಯಾರೋ ಮಾಡೂರ್ಗ್ ದಾರಿ ಬುಟ್ಬುಡು. ನನ್ ಮಗ ಮಾಡ್ತಾನೆ ಗೀಡ್ತಾನೆ ಅನ್ನೋ ಕನ್ಸೆಲ್ಲಾ ಮತ್ಬುಡು' ಎಂದು ಕಡ್ಡಿ ತುಂಡೊಡೆದವನಂತೆ ಹೇಳಿ ಹೊರ ನಡೆದ. ಶಿವಣ್ಣ ತಮ್ಮನ ಮಾತಿನಿಂದ ಪೆಚ್ಚಾದವನಂತೆ ತಲೆ ತಗ್ಗಿಸಿ ಕುಳಿತ. ಸುಶೀಲಮ್ಮ ಅಳುತ್ತಾ ಅಡುಗೆ ಕೋಣೆ ಸೇರಿದರು. ಪೂಜಾರಿ ಬಸಯ್ಯನವರು ತಲೆ ಮೇಲೆ ಕೈ ಹೊತ್ತು ಸುಮ್ಮನೆ ಕುಳಿತರು.

'ಬಸಯ್ಯ ಬಸಯ್ಯ' ಎಂದು ಯಾರೋ ಹೊರಗೆ ಜೋರು ಧನಿಯಲ್ಲಿ ಕೂಗಿದ ಹಾಗಾಯಿತು. 'ಪಟೇಲ್ ಚನ್ನಪ್ನೋರು ಬರೇಳ್ತಾವ್ರೆ ಅದೇನೋ ಮಾತಾಡುದ್ ಇದಾದಂತೆ ಬೇಗ್ ಹೋಗ್ಬೇಕಂತೆ ಬಸಜ್ಜೋ' ಎಂದು ಹೇಳಿ ಬಸಯ್ಯನವರು ಈಚೆಗೆ ಬರುವುದರಲ್ಲಿ ಇವ ಹೊರಟೇ ಬಿಟ್ಟಿದ್ದ. ಏನೋ ಎತ್ತೋ ಎಂದು ಸರಸರನೆ ಒಂದು ಛತ್ರಿ ಹಿಡಿದುಕೊಂಡು ಬಸಯ್ಯ ಪಟೇಲರ ಮನೆಗೆ ಓಡಿ ಬಂದು, 'ಬುದ್ಧಿ, ಯೋಳ್ ಕಳ್ಸಿದ್ರಂತೆ' ಎಂದ. "ಹ್ಞೂ ಬಾ ಬಸಯ್ಯ, ಹನ್ನೆರಡ್ ವರ್ಷದ್ ಮ್ಯಾಲೆ ಆ ನಮಪ್ಪ ಮಂಟೆದೊಡ್ಯನ ಜಾತ್ರೆನ ವಸಿ ಗ್ರಾಂಡಾಗಿ ಮಾಡುವ ಅಂತ ಎಲ್ರೂ ತೀರ್ಮಾನ ಮಾಡವಿ. ಈ ಸರ್ತಿ ಜಾತ್ರೆಗೆ ಪ್ರಾಣಿ ಬಲಿ ಮಾಡ್ಬಾರ್ದು ಅಂತ ಸರ್ಕಾರನು ಅಪ್ಣೆ ಹೊರಡ್ಸದೆ. ಡಿಸಿ ಮೇಡಮ್ಮೆ ಬಂದಾರಂತೆ ಜಾತ್ರೆ ಹದ್ದಬಸ್ತಾಗ್ ನಡ್ಸಕೆ, ಹಂಗಾಗಿ ಜಾತ್ರೆ ಕಟ್ನಿಟ್ಟಾಗ್ ನಡೀಸ್ಬೇಕು. ದೇವರು, ಪೂಜೆ, ಉತ್ಸವ ಎಲ್ಲಾದ್ದೂ ನಿಂದೆಯಾ ಜವಾಬ್ದಾರಿ. ಈಗಿಂದ ಎಲ್ಲಾ ಯವಸ್ಥೆ ಮಾಡ್ಕೊಂಬುಡ್ ಬಸಯ್ಯ. ಚೂರು ಚುತಿ ಬರ್ದಂಗ್ ಜಾತ್ರೆ ನಡೀಬೇಕು. ಈ ಸರಿ ಎಮ್ಮೆಲ್ಲೆ ಸಾಹೇಬ್ರುಗ್ಹೇಳಿ ವಸಿ ಎಕ್ಸ್‌ಟ್ರಾ ಬಸ್ ವ್ಯವಸ್ಥೆ ಮಾಡುವಾ, ಜನ ಜಾಸ್ತಿ ಆದ್ರೆ ಎರಡ್ಕಡೆ ಮಂಗಳಾರತಿ ಯವಸ್ಥೆ ಮಾಡ್ಕೋ, ಒಟ್ನಲ್ಲಿ ಜನ್ಗುಳ್ಗ್ ತೊಂದ್ರೆ ಆಗ್ಬಾರ್ದು ನೋಡಪ್ಪ...'

ಪಟೇಲರ ಮಾತುಗಳು ಈ ಸರ್ತಿ ಬರುವ ಜಾತ್ರೆ ಜೋರಾಗಿ ನಡೆಯುವ ಸೂಚನೆಯನ್ನ ನೀಡುತ್ತಿದ್ದವು. ಆದರೆ ಹದಗೆಟ್ಟು ಹೋಗಿರುವ ಆರೋಗ್ಯದ ನಡುವೆ ವಾರಗಟ್ಟಲೆ ನಡೆಯವ ಜಾತ್ರೆಯಲ್ಲಿ ತಾನು ಪೂಜೆಯನ್ನು ಮಾಡಿಕೊಂಡು ನಿಭಾಯಿಸುವುದಾದರು ಹೇಗೆ? ಬೆಳಿಗ್ಗೆ ಐದು ಗಂಟೆಯಿಂದ ರಾತ್ರಿಯೆಲ್ಲಾ ನಿದ್ದೆಗೆಟ್ಟು ಜಾಗರಣೆ, ಚಂದ್ರಮಂಡಲ ಉತ್ಸವ, ಗುಡ್ಡರ ಸೇವೆ ಅಂತ ನಿದ್ದೆಗೆಟ್ಟರೆ ತನ್ನ ಸ್ಥಿತಿ ಏನಾಗಬೇಡ ಎಂದು ಚಿಂತೆ ಶುರುವಾಯಿತು. ಹೇಗಾದರೂ ಮಾಡಿ ಮಾದೇಶನನ್ನು ಪೂಜಾರಿಕೆಗೆ ಒಪ್ಪಿಸುವ ಎಲ್ಲಾ ಪ್ರಯತ್ನವೂ ವಿಫಲವಾದ್ದರಿಂದ ಬಸಯ್ಯನವರಿಗೆ ದಾರಿ ಕಾಣದಂತಾಯಿತು. ಕೊನೆಯ ಪ್ರಯತ್ನ ನೋಡೇಬಿಡುವ ಎಂದು ನಿರ್ಧರಿಸಿ ತೆಳ್ಳನೂರಿನ ತಮ್ಮ ಬೀಗರು ಸಾಹುಕಾರ್ ಸುಬ್ಬಪ್ಪನವರ ಹತ್ತಿರ ಇವನಿಗೆ ಬುದ್ಧಿ ಹೇಳಿಸಿ ಒಪ್ಪಿಸಿದರಾಯಿತು. ಹೇಗಿದ್ದರೂ ಸುಬ್ಬಪ್ಪನವರದು ಸ್ವಲ್ಪ ಖಡಕ್ ವ್ಯಕ್ತಿತ್ವ. ಮಾದೇಶನು ಯಾರಿಗಾದರೂ ಗೌರವ ಕೊಡುತ್ತಾನೆಂದಾದರೆ ಅದು ಸುಬ್ಬಪ್ಪನವರಿಗೆ ಮಾತ್ರವಾದ್ದರಿಂದ ಇವನನ್ನು ಈ ಕೆಲಸಕ್ಕೆ ಶತಾಯ ಗತಾಯ ಒಪ್ಪಿಸಲು ಅವರೆ ಸರಿಯಾದವರೆಂದು ಯೋಚಿಸಿ ತಮ್ಮ ಮಗಳು ಶಶಿ ಮತ್ತು ಅಳಿಯನ ಜೊತೆ ಮಾತನಾಡಿದರು. ಶಶಿ ಅವನ ಮನವೊಲಿಸಿ ತೆಳ್ಳನೂರಿಗೆ ಕರೆದುಕೊಂಡು ಹೊರಟಳು.

ಮಾದೇಶ ಕಣ್ಣು ಉಜ್ಜಿಕೊಂಡು ಹಜಾರದೊಳಗೆ ಬಂದ. ಸುಬ್ಬಪ್ಪನವರು ಗಾಲಿ ಚೇರಿನಲ್ಲಿ ಎಲೆ ಅಡಿಕೆ ಜಗಿಯುತ್ತಾ ಕುಳಿತಿದ್ದರು. 'ಏನ್ಲಾ ಮಾದೇಶ ಏನ್ ಮಾಡ್ಕಂಡಿದಿಯಾ ಈಗ? ಜೀವನ ಹೆಂಗ ನಡೀತಾ ಇದ್ದಾದು' ಎಂದರು. ಮಾದೇಶನಿಗೆ ಅವರ ಗಡಸು ಧ್ವನಿ ಚೂರು ಭಯವನ್ನೇ ಹುಟ್ಟಿಸಿತು. ಹೆದರಿಕೆಯಿಂದಲೇ